**ಉಪಾಧ್ಯಕ್ಷರು** : ಇಲ್ಲಿ ನಿಯಮ–69ರ ಮೇರೆಗೆ ವಿಷಯದ ಬಗ್ಗೆ ಚರ್ಚೆ ಚರ್ಚೆ ಮುಕ್ತಾಯವಾಯಿತು. ನಾಳೆ ಬೆಳಗ್ಗೆ 10 ಗಂಟೆಗೆ ಸರ್ಕಾರದ ವತಿಯಿಂದ ಉತ್ತರ. ಈಗ ಪ್ರಶ್ನೋತ್ತರಗಳು.

## 6. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

**ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಬಹುದು.**

315(1672) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವನಬಾಗೇವಾಡಿ ತಾಲ್ಲೂಕಿನ ಮುತ್ತಗಿ ಹಾಗೂ ಬಿಜಾಪುರ ತಾಲ್ಲೂಕಿನ ಜೈನಾಪುರ ಹಾಗೂ ದೇವರಗೆಣ್ಣೂರು ಗ್ರಾಮಗಳಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಪ್ರಸ್ತಾವನೆಗೆ ಅನುಗುಣವಾಗಿ ಮಾರ್ಗಸೂಚಿ ಪ್ರಕಾರ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಇ) ಯಾವ ಕಾಲಮಿತಿಯೊಳಗಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗುವುದು.

**ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಸಚಿವರು)** :

ಅ) ಪ್ರಸ್ತಾವನೆ ಬಂದಿರುತ್ತದೆ.

ಆ)ಮತ್ತು ಇ) ಮಾರ್ಗಸೂಚಿ ಪ್ರಕಾರ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿರುವುದಿಲ್ಲ.

**ಶ್ರೀ ಶಿವಾನಂದ ಎಸ್. ಪಾಟೀಲ್** : ಮಾನ್ಯ ಉಪಾಧ್ಯಕ್ಷರೆ, ಇದೇ ವಿಧಾನ ಸಭೆಯಲ್ಲಿ ಕಳೆದ ಮಾರ್ಚ್ ತಿಂಗಳಲ್ಲಿ ಇದೇ ಪ್ರಶ್ನೆಗೆ ಸರ್ಕಾರದಿಂದ ಉತ್ತರ ಕೊಟ್ಟಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯುವ ವಿಷಯದಲ್ಲಿ ನಾನು ಕೇಳಿದ ಪ್ರಶ್ನೆಗೆ ಕಳೆದ ಸಲ ಮಾರ್ಚ್ 23ನೇ ತಾರೀಖು ನಮ್ಮಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯುವ ಗುರಿ ಇಲ್ಲವೆಂದು ಮಾನ್ಯ ಆರೋಗ್ಯ ಸಚಿವರಾದ ತಾವೇ ನನಗೆ ಒಂದು ಉತ್ತರ ಕೊಟ್ಟಿದ್ದಿರಿ. ಆದರೂ ಆ ಸಂದರ್ಭದಲ್ಲಿ ತಮಗೆ ಮನವರಿಕೆ ಮಾಡಿಕೊಟ್ಟಿದ್ದೆ. ರಾಜ್ಯದಲ್ಲಿ ಎರಡು ಆರೋಗ್ಯ ಕೇಂದ್ರಗಳನ್ನು ತೆರೆದಿದ್ದಾರೆ. ಆ ಹಿನ್ನೆಲೆಯಲ್ಲಿ ಒಂದು ಆರೋಗ್ಯ ಕೇಂದ್ರವನ್ನು ಆದರೂ ನಿಮ್ಮ ತಾಲ್ಲೂಕಿಗೆ

ಕೊಡಿಸತಕ್ಕಂಥ ದೃಷ್ಟಿಯಲ್ಲಿ ನಾನು ಪ್ರಯತ್ನ ಮಾಡುತ್ತೇನೆಂದು ತಾವು ಭರವಸೆ ಕೊಟ್ಟಿದ್ದಿರಿ. ಆ ಭರವಸೆ ಏನಾಯಿತು ಎನ್ನುವ ಬಗ್ಗೆ ತಾವು ಇವತ್ತು ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆರ್. ಅಶೋಕ್** : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಬಸವನಬಾಗೇವಾಡಿ ತಾಲ್ಲೂಕಿಗೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವ ಕುರಿತು ಕೇಳಿದ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಈಗಾಗಲೇ ಅಲ್ಲಿಗೆ ಎಷ್ಟು PHC ಗಳಿರಬೇಕೋ ಅದಕ್ಕಿಂತ ಜಾಸ್ತಿ ಇದೆ. ಬಸವನಬಾಗೇವಾಡಿಯಲ್ಲಿ population ಒಟ್ಟು ಎರಡೂವರೆ ಲಕ್ಷ ಇದ್ದು, ಈ ತಾಲ್ಲೂಕಿನಲ್ಲಿ 15 ಪ್ರಾಥಮಿಕ ಆರೋಗ್ಯ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಅದೇ ರೀತಿ ಬಿಜಾಪುರ ತಾಲ್ಲೂಕು ಗ್ರಾಮಾಂತರದಲ್ಲಿ 2,84,000 population ಇದ್ದು 12 ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಅಂದರೆ 30000ಕ್ಕೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕೆಂದು ಕೇಂದ್ರ ಸರ್ಕಾರದ ಏನು ನಿಯಮಗಳಿವೆ, ಆ ನಿಯಮದಡಿಯಲ್ಲಿ ಈಗಾಗಲೇ ನಾವು ಮಂಜೂರು ಮಾಡಿದ್ದೇವೆ. ಆದರೆ ಕಳೆದ ಬಾರಿ ಇದೇ ಪ್ರಶ್ನೆಯನ್ನು ಮಾನ್ಯ ಶಿವಾನಂದ ಪಾಟೀಲ್‌ರವರು ಕೇಳಿದಾಗ ನಾನು ಹೇಳಿದ್ದೇನೆ. ನನ್ನ ಉದ್ದೇಶ ಏನಿದೆಯೆಂದರೆ, ಬೆಂಗಳೂರು ಇರಬಹುದು, ಮೈಸೂರು ಇರಬಹುದು, ಬೇರೆ ಬೇರೆ ನಗರ ಪ್ರದೇಶಗಳಲ್ಲಿ PHC ಗಳಿಗೆ ಕೆಲಸ ಇಲ್ಲದಂಥ ವ್ಯವಸ್ಥೆ ಇದೆ. ಅಂದರೆ ಇಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳು ಆಗಿವೆ. ಬೆಂಗಳೂರಿನಲ್ಲಿ ಕೆ.ಸಿ. ಜನರಲ್ ಆಸ್ಪತ್ರೆ ಈ ತರಹ ದೊಡ್ಡ ಆಸ್ಪತ್ರೆಗಳು ಇರುವುದರಿಂದ ಇಲ್ಲಿರುವ PHC ಗಳನ್ನೆಲ್ಲಾ ರದ್ದು ಮಾಡಬೇಕೆನ್ನುವ ಉದ್ದೇಶವನ್ನು ನಾನಿಟ್ಟುಕೊಂಡಿದ್ದೇನೆ. ಅದರ ಬಗ್ಗೆ 7–8 ಜನ courtಗೆ ಹೋಗಿದ್ದಾರೆ. ಆದಷ್ಟು ಶೀಘ್ರವಾಗಿ ಇದರ ಬಗ್ಗೆ ಕ್ರಮವನ್ನು ತೆಗೆದುಕೊಂಡು ಈ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡುವುದಕ್ಕೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನ್ನುವ ಮಾತನ್ನು ತಮ್ಮ ಮೂಲಕ ಹೇಳಬಯಸುತ್ತೇನೆ.

**ಶ್ರೀ ಶಿವಾನಂದ ಎಸ್. ಪಾಟೀಲ್** : ನಮ್ಮ ತಾಲ್ಲೂಕಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಏಕೆ ಬೇಕೆನ್ನುವ ಕುರಿತು ನಾನು ಬಹಳ ಸ್ಪಷ್ಟವಾಗಿ ವಿವರಣೆ ಕೊಟ್ಟಿದ್ದೆ. ಆವಾಗ ಏನಾಗಿತ್ತೆಂದರೆ, ಜನಸಂಖ್ಯೆ ಆಧಾರವಾಗಿಟ್ಟುಕೊಂಡು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆದಿರುವುದು ನಿಜ. ಅದನ್ನು ಇಲ್ಲ ಎಂದು ನಾನು ಅಲ್ಲಗೆಳೆಯಲಿಲ್ಲ. ಆದರೆ geographically ನೋಡಬೇಕಾಗುತ್ತದೆ. 25 ಕಿ.ಮೀ. radiusನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಗದಿರುವ ಸಂದರ್ಭದಲ್ಲಿ ನೀವೇನು

ಮಾಡುತ್ತೀರಿ ಎನ್ನತಕ್ಕಂಥದ್ದು. ನಾನು ಆ ಜೈನಾಪುರ ಎನ್ನತಕ್ಕ ಸ್ಥಳವನ್ನು ಏಕೆ ಪ್ರಸ್ತಾಪ ಮಾಡಿದ್ದೆನೆಂದರೆ, that becomes a submergence area. ಆಲಮಟ್ಟಿ ಹಿನ್ನೀರಿನಿಂದ ಮುಳುಗಿರುವ 25 ಹೊಸ ಊರುಗಳು ಸೃಷ್ಟಿಯಾಗಿವೆ. ಅದರ ಸುತ್ತಮುತ್ತ ಒಂದೂ ಸಹ ಆರೋಗ್ಯ ಕೇಂದ್ರಗಳಿಲ್ಲ. ಆ ಹಿನ್ನೆಲೆಯಲ್ಲಿ ನಾನು ನಿಮಗೆ ಹೇಳಿರುವಂಥದ್ದು. ಅದಕ್ಕೆ ಆಗ ನೀವು ಸಹ ಒಪ್ಪಿಕೊಂಡಿದ್ದೀರಿ. ಆ ಭಾಗದಲ್ಲಿ ಇವತ್ತು brain fever ಬರುತ್ತದೆ, Dengue ಜ್ವರ ಬರುತ್ತದೆ, ಅದರಲ್ಲೂ ವಿಶೇಷವಾಗಿ ಚಿಕೂನ್ ಗುನ್ಯಾ ರೋಗ ಬಂದಿರುವುದು ಇವತ್ತು ನಿಮಗೆಲ್ಲಾ ಗೊತ್ತಿದೆ. ಇದರ ಬಗ್ಗೆ ನೀವೇನು ಮಾಡುತ್ತೀರೋ ಆ ಭಗವಂತನಿಗೇ ಗೊತ್ತು. ಇಡೀ ಜಿಲ್ಲೆ ತುಂಬಾ ಚಿಕೂನ್ ಗುನ್ಯಾ ಕಾಯಿಲೆ ಇದೆ. ರಾಜ್ಯದ ತುಂಬಾ ಹರಡಿದೆ ಎನ್ನುವುದು ಅದು ಸರ್ವೇಸಾಮಾನ್ಯ ಅದು ನನಗೆ ಗೊತ್ತಿದೆ. ಅದಕ್ಕೆ ಇಂಥ ಒಂದು ಪರಿಸ್ಥಿತಿಯಲ್ಲಿ ನಾನು ನಿಮಗೆ ಇಲ್ಲಿ ಬಂದು ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗಿ ಸಿಕ್ಕಿಸತಕ್ಕಂಥ ವಿಚಾರ ನನಗಿಲ್ಲ. ದಯಮಾಡಿ, ಇದನ್ನು ನೀವೇ ಹೇಳಿರತಕ್ಕಂಥದ್ದು. It becomes an assurance ನೀವೇ floor ನಲ್ಲಿ ಮತ್ತು ಕಳೆದ ಏಪ್ರಿಲ್ ತಿಂಗಳಲ್ಲಿ ನೀವು D.H.O. ಕಡೆಯಿಂದ report ಸಹ ತರಿಸಿಕೊಂಡಿದ್ದೀರಿ. ಇಲ್ಲಿ ಏನು ನೀವು ಉತ್ತರ ಕೊಟ್ಟು ಹೋದಿರಿ, ಅವರು ಏಪ್ರಿಲ್‌ನಿಂದ ಇಲ್ಲಿಯವರೆಗೆ ಅದರ ಮೇಲೆ ಒಂದು file ಸಹ movement ಇಲ್ಲ. ನೀವು ಒಂದು ಕಡೆ ನಕಲಿ ವೈದ್ಯರನ್ನು ಹಿಡಿಯುತ್ತಿದ್ದೀರಿ. ಅದು ಬಹಳ ಒಳ್ಳೆಯದು. ನಮಗೆ ಅಸಲಿ ವೈದ್ಯರನ್ನಾದರೂ ಕೊಡಿ. ಯಾವುದಾದರೂ ಉತ್ತರವನ್ನು ನೀವು ಸ್ಪಷ್ಟವಾಗಿ ಕೊಡತಕ್ಕಂಥದ್ದು ಆಗಬೇಕು. ಈ ಸಾರಿ ಸರಿಯಾದ ಉತ್ತರ ಕೊಟ್ಟರೂ ಸಹ ಅದರಂತೆ ನಡೆದುಕೊಳ್ಳುವ ಸ್ಥಿತಿಯಲ್ಲಾದರೂ ಮಾಡಿ.

**ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ)** : ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ನಗರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಾನ್ಯ ಅಶೋಕ್‌ರವರು ನಾಳೆಯೇ ತೆಗೆದುಹಾಕಿದರೂ ಸಹ ನಮ್ಮದೇನೂ ಅಭ್ಯಂತರವಿಲ್ಲ. ನನ್ನ ಕ್ಷೇತ್ರದಲ್ಲಿ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಬೆಂಗಳೂರಿನಲ್ಲಿ ಚಿಕುನ್ ಗುನ್ಯಾ ಪ್ರಾರಂಭವಾಗಿದೆಯೆಂದು ಗೊತ್ತಾದ ಮೇಲೆ ಸುಮಾರು ಒಂದು ವಾರದಿಂದ ಇಲ್ಲಿ ನಾನು ಸುತ್ತಾಡುತ್ತಿದ್ದೇನೆ. ಬೆಳಿಗ್ಗೆ 10 ಗಂಟೆಯಾಗಿದ್ದರೂ ಸಹ ಆ ಆಸ್ಪತ್ರೆಗಳು open ಆಗಿರುವುದಿಲ್ಲ. Mysore road ನಲ್ಲಿ CAR quarters ಎನ್ನುವುದು ಇದೆ. ಆ ಡಾಕ್ಟರ್ ಅನ್ನು ತೆಗೆದು ಎಲ್ಲಿಗಾದರೂ ನೀರು ನೆಲೆ ಇಲ್ಲದ ಕಡೆಗೆ ಹಾಕಿ ಎಂದು ನಾನು ಪತ್ರವನ್ನು ಸಹ ಬರೆದೆ. ಅಲ್ಲಿರುವ ಆಸ್ಪತ್ರೆಗೆ ಆ ಡಾಕ್ಟರ್ ಬರುವುದಿಲ್ಲ. ಅದರ ಪಕ್ಕದಲ್ಲಿ

ಅಜಾದ್‌ನಗರ ಎನ್ನುವಲ್ಲಿ ಇನ್ನೊಂದು dispensary ಇದೆ. ಅಲ್ಲಿ Corporation ನಿಂದ first class ಆದ ಆಸ್ಪತ್ರೆಯನ್ನು ಮಾಡಿದ್ದೇವೆ. ಮಂತ್ರಿಗಳಾದ ತಾವೂ ಕೂಡ ನಗರವನ್ನು ಪ್ರತಿನಿಧಿಸುತ್ತಿದ್ದೀರಿ. ದಯಮಾಡಿ ಅಂಥವನ್ನೆಲ್ಲಾ ತೆಗೆದು ಹಳ್ಳಿಗಾಡಿನಲ್ಲಿ ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿಗೆ ಇದನ್ನು ಕೊಡುವಂಥದ್ದಕ್ಕೆ ನಮ್ಮದೇನೂ ತಕರಾರು ಇಲ್ಲ. ಈ ಕೆಲಸ ತತ್‌ಕ್ಷಣ ಆಗಲಿ.

**ಶ್ರೀ ಆರ್. ರೋಷನ್ ಬೇಗ್** : ಮಾನ್ಯ ಸೋಮಣ್ಣನವರು ಹೇಳಿರುವುದು ನೂರಕ್ಕೆ ನೂರು ನಿಜ.

**ಶ್ರೀ ವಿ. ಸುನಿಲ್ ಕುಮಾರ್** : ಮಾನ್ಯ ಉಪಾಧ್ಯಕ್ಷರೆ, 30000 ಜನರಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಎಂದು ಏನು ಕಾನೂನಿದೆ ಅದು ಸರಿ. ಆದರೆ ಮಲೆನಾಡಿನ ಪ್ರದೇಶದಲ್ಲಿ ಭೌಗೋಳಿಕವಾಗಿ ಆಲೋಚನೆ ಮಾಡುವುದು ಬಹಳ ಅಗತ್ಯ ಎನ್ನುವುದು ನನ್ನ ಅಭಿಪ್ರಾಯ. ಏಕೆಂದರೆ, ಈ ಹಿಂದೆಯೂ ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಭೌಗೋಳಿಕವಾಗಿ 20–25 ಕಿ.ಮೀ. ಪ್ರದೇಶದಲ್ಲಿರುವ ನಮ್ಮಂಥ ಕಡೆಗಳಲ್ಲಿ ಆರೋಗ್ಯ ಕೇಂದ್ರಗಳು ಇವತ್ತೂ ಕೂಡ ಇಲ್ಲ. ಹಾಗಾಗಿ ಬೆಂಗಳೂರಿಗೆ ಇವತ್ತು ಏನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ರದ್ದು ಮಾಡಬೇಕೆಂದು ಹೇಳುತ್ತಾರೋ, ಅದನ್ನು ತಕ್ಷಣ ಸರ್ಕಾರ ರದ್ದು ಮಾಡಿ ಆ ಎಲ್ಲಾ ಕೇಂದ್ರಗಳನ್ನು ನಮ್ಮಂಥ ಗ್ರಾಮೀಣ ಪ್ರದೇಶದ ಮಲೆನಾಡಿನ ಪ್ರದೇಶಗಳಿಗೆ ಕೊಡುವುದು ಬಹಳ ಅಗತ್ಯ ಎಂದು ನಾನು ಭಾವಿಸುತ್ತೇನೆ.

**ಶ್ರೀ ಜಿ. ನರಸಿಂಹಸ್ವಾಮಿ** : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಬೆಂಗಳೂರಿನಲ್ಲಿಯೇ ಇದ್ದಾರೆ. ಇಲ್ಲಿ ಸುತ್ತಲೂ ಸುಟ್ಟ ಗಾಯಗಳಿಗೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಒಂದು ಬಿಟ್ಟರೆ ಬೇರೆಕಡೆ ಎಲ್ಲೂ ಇಲ್ಲ. ಆದರೆ ಅಲ್ಲಿ ಆರೋಗ್ಯಕೇಂದ್ರಗಳನ್ನು ಹೋಗಿ ನೋಡಬೇಕು. ಅದು ಬಹಳ ಕಡಿಮೆ ಸಂಖ್ಯೆಯಲ್ಲಿರುವುದರಿಂದ ಬಹಳ ತೊಂದರೆಯಾಗಿದೆ. ಮಾನ್ಯ ಸೋಮಣ್ಣನವರು ಸಣ್ಣ ಆರೋಗ್ಯ ಕೇಂದ್ರಗಳನ್ನು ಮುಚ್ಚಿ ಪರವಾಗಿಲ್ಲ ಎಂದು ಹೇಳಿದರು. ಇಲ್ಲಿ ಮಾತ್ರವಲ್ಲ. ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲೂ ಸಹ ಸಮಯಕ್ಕೆ ಸರಿಯಾಗಿ ಆಸ್ಪತ್ರೆಗಳ ಬಾಗಿಲನ್ನು ತೆರೆಯದಂಥ ಪರಿಸ್ಥಿತಿ ಇದೆ. ಆರೋಗ್ಯ ಸಚಿವರಾದ ತಾವು ಸಾಮಾನ್ಯ ಜನರಂತೆ ಅಲ್ಲಿ ಹೋಗಿ ನೋಡಿದರೆ ಅರ್ಥವಾಗುತ್ತದೆ. ಅಲ್ಲಿ ಹೋಗಿದ್ದೆವು. ಸುಟ್ಟ ಗಾಯಗಳನ್ನು ಅಲ್ಲಿ ನೋಡಲಿಕ್ಕೆ ಸಾಧ್ಯವಾಗುವುದಿಲ್ಲ ಅಧ್ಯಕ್ಷರೆ. ಇದನ್ನು ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ನಾನು ತರುತ್ತಿದ್ದೇನೆ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್** : ಮಾನ್ಯ ಉಪಾಧ್ಯಕ್ಷರೆ, ಈಗತಾನೆ ಈ ಉತ್ತರದಲ್ಲಿ ಮಾನ್ಯ ಶಿವಾನಂದ ಪಾಟೀಲರ ಪ್ರಶ್ನೆಗೆ ಮಾನ್ಯ ಸಚಿವರು ಇದರಲ್ಲಿ

ಮಾರ್ಗಸೂಚಿ ಪ್ರಕಾರ ಪ್ರಾಥಮಿಕ ಆರೋಗ್ಯ ಕೇಂದ್ರದ ಸ್ಥಾಪನೆ ಅವಶ್ಯಕತೆ ಇರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಆದರೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಬಹಳ ಅವಶ್ಯಕತೆ ಇರುವುದರಿಂದ ಒಂದು ಸಲಹೆಯನ್ನು ಕೊಡಲಿಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಒಂದು ಒಳ್ಳೆಯ ಸಲಹೆಯನ್ನು ಈಗಾಗಲೇ ಮಾನ್ಯ ಸೋಮಣ್ಣನವರು ಕೊಟ್ಟಿದ್ದಾರೆ. ನಗರಪ್ರದೇಶದಲ್ಲಿ ಅವಶ್ಯಕತೆ ಇಲ್ಲದಿರುವುದನ್ನು ಹಳ್ಳಿಪ್ರದೇಶಕ್ಕೆ ನೀವು ಸ್ಥಳಾಂತರ ಮಾಡಬಹುದು. ಇನ್ನೊಂದು ಸಲಹೆ ಏನೆಂದರೆ, ಈ ರಾಜ್ಯದಲ್ಲಿರುವ 36 ಅತಿ ಹಿಂದುಳಿದಿರುವ ತಾಲ್ಲೂಕುಗಳೆಂದು ಡಾ॥ ನಂಜುಂಡಪ್ಪ ವರದಿಯಲ್ಲಿ ಏನಿದೆ, ಕಳೆದ ಸರ್ಕಾರ ಈಗಾಗಲೇ ಆ ಒಂದೊಂದು ತಾಲ್ಲೂಕುನಲ್ಲಿ ಒಂದೊಂದು PHC ಯನ್ನು CHC ಯಾಗಿ ಮೇಲ್ದರ್ಜೆಗೆ convert ಮಾಡಿದೆ. ಆದರೆ ಅವು ಇನ್ನೂ ಸಹ CHC ಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅದರ ಬಗ್ಗೆ ಅತೀ ಶೀಘ್ರದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಈಗ ನೀವು ಯಾವ PHC ಯನ್ನು CHC ಗೆ upgrade ಮಾಡಿದ್ದೀರಿ, ಉಳಿದಿರತಕ್ಕಂಥ PHC ಯನ್ನು ಅದೇ ತಾಲ್ಲೂಕಿನಲ್ಲಿ ಎಲ್ಲಿ ಅವಶ್ಯಕತೆಯಿದೆ ಅಲ್ಲಿಗೆ ಮಂಜೂರು ಮಾಡತಕ್ಕಂಥ ಕೆಲಸವನ್ನು ಆದಷ್ಟು ಶೀಘ್ರ ಮಾಡಬೇಕು. ಏಕೆಂದರೆ ಇದರಲ್ಲಿ ಹೊಸದಾಗಿ ಯಾವುದೇ financial implication ಇಲ್ಲ. ಇದಕ್ಕೆ ಬಜೆಟ್‌ನಲ್ಲಿ allocation ಮಾಡಬೇಕಾದ ಅವಶ್ಯಕತೆಯಿಲ್ಲ. ಏಕೆಂದರೆ ಈಗಾಗಲೇ ನಿರ್ವಹಿಸುತ್ತಿರತಕ್ಕಂಥ PHC ಆಗಿರುತ್ತದೆ. ಅದನ್ನು ನೀವು CHC ಯಾಗಿ upgrade ಮಾಡಿದ್ದೀರಿ. ಆ PHC ಯನ್ನು ಇದ್ದ ತಾಲ್ಲೂಕಿನಲ್ಲಿಯೇ ವರ್ಗಾವಣೆ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಆರ್. ಅಶೋಕ್** : ಮಾನ್ಯ ಉಪಾಧ್ಯಕ್ಷರೆ, ಆ PHC ಗಳು CHC ಆದಾಗ ಆ PHC ಗಳನ್ನು ಬೇರೆ ಕಡೆಗೆ ಕೊಡಬೇಕೆನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಮ್ಮ ನಿಯಮದಡಿಯಲ್ಲಿ ನಾವು ಆ ರೀತಿ ಮಾಡುವುದು ಸರಿಯಲ್ಲ. ಏಕೆಂದರೆ, PHC ಯಿಂದ CHC ಆದಮೇಲೆ CHC ಯಿಂದ ತಾಲ್ಲೂಕು ಆಸ್ಪತ್ರೆ ಆದಮೇಲೆ ಒಂದೊಂದೇ ಮಾಡುತ್ತಾ ಹೋದರೆ ಅದು merge ಆಗುತ್ತಾ ಹೋಗುತ್ತದೆ.

**ಮಾನ್ಯ ಸದಸ್ಯರೊಬ್ಬರು** : ಮಾನ್ಯ ಆರೋಗ್ಯ ಸಚಿವರೆ, ಈ ರೀತಿ ಹಿಂದೆ ಮಾಡಿದ ಉದಾಹರಣೆ ಇದೆ. ಈ ಸಲ ಮಾಡಲಿಕ್ಕೆ ಏನೂ ತೊಂದರೆ ಇಲ್ಲ. 12 case ಗಳು ಇದ್ದು ದಯವಿಟ್ಟು ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್** : ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸಚಿವರ ಗಮನಕ್ಕೆ ತರಲಿಚ್ಛೆಪಡುತ್ತೇನೆ. ಏಕೆಂದರೆ, ಮಾನ್ಯ ಸಚಿವರಿಗೆ ಗೊತ್ತಿರಲಿಲ್ಲವೆಂದು ತೋರುತ್ತದೆ.

**ಉಪಾಧ್ಯಕ್ಷರು** : ಒಂದ್ನಿಮಿಷ ಕುಳಿತುಕೊಳ್ಳಿ. ಸಚಿವರು ಏನು ಹೇಳುತ್ತಾರೆಂಬುದನ್ನು ಕೇಳಿ.

**ಶ್ರೀ ಆರ್. ಅಶೋಕ್** : ಮಾನ್ಯ ಪಾಟೀಲ್‌ರು ಏನು ಹೇಳಿದ್ದಾರೆ, ಈಗಾಗಲೇ ಅವರ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಈ ರೀತಿ ಬೆಂಗಳೂರಿನಲ್ಲಿ ಇರತಕ್ಕಂಥದ್ದು ಅಥವಾ ರಾಜ್ಯದ ಬೇರೆ ನಗರ ಪ್ರದೇಶದಲ್ಲಿ PHC ಗಳು work ಆಗುತ್ತಿಲ್ಲ. ಅಲ್ಲಿರುವವರು ಬೆಂಗಳೂರಿನಲ್ಲಿಯೇ ಇರಬೇಕೆನ್ನುವ ಒಂದೇ ಒಂದು ದೃಷ್ಟಿಯಿಂದ ಇದ್ದಾರೆಯೇ ಹೊರತು ಅವರು ಸೇವೆ ಮಾಡಬೇಕೆನ್ನುವ ದೃಷ್ಟಿಯಿಂದ ಅಲ್ಲ. ಕೆಲವರೆಲ್ಲಾ court ಮೆಟ್ಟಲು ಹತ್ತಿದ್ದಾರೆ. ಆ ದೃಷ್ಟಿಯಿಂದ ನಾನು ಈಗಾಗಲೇ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇನೆ. ಮಾನ್ಯ ಪಾಟೀಲರು ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ ಮಾಡಬೇಕೆಂದು ಏನು ಕೇಳಿದ್ದಾರೆ, ಅದನ್ನು ಮಂಜೂರು ಮಾಡುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

**ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್** : ಮಾನ್ಯ ಉಪಾಧ್ಯಕ್ಷರೆ, ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಆರೋಗ್ಯ ಸಚಿವರು ಹೇಳಿದರು. ಆದರೆ ಕಳೆದ ವರ್ಷ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಾಡಿದ್ದಾರೆ.

**ಉದ್ಯೋಗ ವಿನಿಮಯ ಕಛೇರಿಯಿಂದ ಒದಗಿಸಿರುವ ಉದ್ಯೋಗ**

316(1448) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಉದ್ಯೋಗ ವಿನಿಮಯ ಕಚೇರಿಗಳೆಷ್ಟು ಹಾಗೂ ಅವುಗಳು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ.

ಆ) ಇಲ್ಲಿಯವರೆಗೂ ಉದ್ಯೋಗ ವಿನಿಯಮ ಕಚೇರಿಯ ಮುಖಾಂತರ ಎಷ್ಟು ಜನ ನಿರುದ್ಯೋಗಿಗಳಿಗೆ ಸರ್ಕಾರಿ ಉದ್ಯೋಗವನ್ನು ಕಲ್ಪಿಸಲಾಗಿದೆ;

ಇ) ಉದ್ಯೋಗವನ್ನು ಬಯಸಿ ಇದುವರೆವಿಗೂ ನೋಂದಣಿ ಮಾಡಿಸಿರುವ ಕಾರ್ಡುದಾರರ ಸಂಖ್ಯೆ ಎಷ್ಟು (ವರ್ಗವಾರು ವಿವರಣೆ ನೀಡುವುದು)